(೧೨) ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಗಂಟಿಂವಾರಪಲ್ಲಿ ಮಂಡಲ್ ಪಂಚಾಯಿತಿಗೆ ಸೇರಿದ ನಾರೇಪಲ್ಲಿಯಲ್ಲಿ ಯಂತ್ರದ ಮೂಲಕ ಹೆಂಡವನ್ನು ತಯಾರಿಸಂತ್ತಿರುವುದು

ಶ್ರೀ ಬಿ. ನಾರಾಯಣ ಸ್ವಾಮಿ.—ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು ಗಂಟಿಂವಾರಪಲ್ಲಿ ಮಂಡಲ್ ಪಂಚಾಯಿತಿಗೆ ಸೇರಿದ ನಾರೇಪಲ್ಲಿಯ ರಾಷ್ಟ್ರೀಯ ಹೆದ್ದಾರಿ ಹತ್ತಿರ ಇರುವ ಒಂದು ಮನೆಯಲ್ಲಿ ಹೆಂಡ ತಯಾರು ಮಾಡುವ ಯಂತ್ರವನ್ನು ಅಳವಡಿಸಿದ್ದು ಇದರಲ್ಲಿ ತಯಾರಾದ ಹೆಂಡವನ್ನು ತಾಜಾ ಹೆಂಡದೊಡನೆ ಬೆರೆಸುತ್ತಿರುವುದು ಕಂಡುಬಂದಿದೆ. ಯಂತ್ರದ ಮೂಲಕ ತಯಾರು ಮಾಡುವ ಹೆಂಡವನ್ನು ವಿಷ್ಪಮುಷ್ಟಿ (ನಕ್ಸ್‌ವಾಮಿಕಾ) ಬೀಜದಿಂದ ತಯಾರು ಮಾಡುವುದಾಗಿ ತಿಳಿದು ಬಂದಿದೆ. ಈ ಹೆಂಡವನ್ನು ಕುಡಿದ ಜನರು ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇದಕ್ಕೆ ಅಬಕಾರಿ ಇಲಾಖೆಯವರ ಅನುಮತಿ ದೊರೆತಿದೆಯೆ ? ಎಂಬುದು ತಿಳಿದುಬಂದಿಲ್ಲ. ಈ ಬಗ್ಗೆ ಅಬಕಾರಿ ಇನ್‌ಸ್ಪೆಕ್ಟರ್ ಕಛೇರಿಗೆ ಹಲವಾರು ಬಾರಿ ಹೋಗಿಬಂದರೂ ಯಾವ ಪ್ರಯೋಜನವೂ ಆಗಿಲ್ಲ, ಅಲ್ಲದೆ ಈ ಹೆಂಡ ನನ್ನ ಕ್ಷೇತ್ರದಲ್ಲಿ ಸಿಗುವುದಿಲ್ಲವೆಂದು ಆಂಧ್ರಪ್ರದೇಶದಿಂದ ಜನ ಕುಡಿದು ಬರುವುದಾಗಿಯೂ ತಿಳಿಸಲಾಗುತ್ತಿದೆ. ಆದರೆ ಆಂಧ್ರದಿಂದ ಬರತಕ್ಕ ಕೂಲಿ ಜನರು ಹೆಂಡವನ್ನು ಕುಡಿದು ಕರ್ನಾಟಕಕ್ಕೆ ಬರಬಾರದೆಂದು ಅಬಕಾರಿ ಇಲಾಖೆಯವರು ಆಜ್ಞೆ ಮಾಡಿದ್ದಾರೆ. ಆದ್ದರಿಂದ ಕೋಲಾರ ಜಿಲ್ಲೆಯಲ್ಲೇ ಯಂತ್ರಗಳ ಮೂಲಕ ತಯಾರು ಮಾಡಿದ ಹೆಂಡವನ್ನೇ ಕೂಲಿ ಜನರು ಕುಡಿದು ಆರೋಗ್ಯ ಕೆಡುತ್ತದೆ. ಈ ಬಗ್ಗೆ ಅಬಕಾರಿ ಇಲಾಖೆಯವರ ಗಮನಕ್ಕೆ ವಿಷ್ಪ ಹೆಂಡವನ್ನು ತಯಾರು ಮಾಡುವ ಬಗ್ಗೆ ದೂರು ಕೊಟ್ಟಿದ್ದಾಗ್ಯೂ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೇ ಈ ಬಗ್ಗೆ ಗಮನಹರಿಸಿ ವಿಷ್ಪ ಹೆಂಡ ತಯಾರು ಮಾಡುತ್ತಿರುವವರ ಹಾಗೂ ಮಾರುತ್ತಿರುವವರ ಮೇಲೆ ಸೂಕ್ತ ಕ್ರಮ ಕೈಕೊಂಡು ಇದರಲ್ಲಿ ಶಾಮೀಲಾಗಿರುವ ಅಧಿಕಾರಿಗಳ ಬಗ್ಗೆಯೂ ಕ್ರಮ ಕೈಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಶೀಘ್ರವಾಗಿ ಕ್ರಮ ತೆಗೆದುಕೊಂಡು ಏನು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

ಶಾಸನ ರಚನೆ

ಕರ್ನಾಟಕ ಅಬ್ಕಾರಿ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೭ ಮಂಡನೆಗೆ ಅನುಮತಿ ಕೋರಿಕೆ

ಪ್ರೊ॥ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಅಬಕಾರಿ ರಾಜ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ,

> "೧೯೮೭ನೇ ಸಾಲಿನ ಕರ್ನಾಟಕ ಅಬಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ"

ಅಧ್ಯಕ್ಷರು.—ಪ್ರಸ್ತಾ ಏನೆಂದರೆ:

> "೧೯೮೭ನೇ ಸಾಲಿನ ಕರ್ನಾಟಕ ಅಬಕಾರಿ ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಪ್ರೊ॥ ಎ. ಲಕ್ಷೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) (ಮಾನ್ಯ ಅಬಕಾರಿ ರಾಜ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ,

> "೧೯೮೭ನೇ ಸಾಲಿನ ಕರ್ನಾಟಕ ಅಬಕಾರಿ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.